# ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್

(ಕರ್ನಾಟಕ ಸರ್ಕಾರದ ಉದ್ಯಮ)

(ಹಿಂದಿನ ಕರ್ನಾಟಕ ಭೂಸೇನಾ ನಿಗಮ ನಿಯಮಿತ)

# KARNATAKA RURAL INFRASTRUCTURE DEVELOPMENT LTD.,

**(A Government of Karnataka Undertaking)**

**(Formerly Karnataka Land Army Corporation Limited)**

ಸೇವೆ ನಿಷ್ಠೆ ದಕ್ಷತೆ


ಸಂ:ಕೆಆರ್‌ಐಡಿಎಲ್/ಕಾಮಗಾರಿ/ಗುಣನಿಯಂತ್ರಣ/2013-14 ದಿನಾಂಕ:19-02-2014

ಗೆ,

ಜಂಟಿ/ಉಪ/ಸಹಾಯಕ ನಿರ್ದೇಶಕರು,

ಕೆಆರ್‌ಐಡಿಎಲ್.,

---

**ವಿಷಯ:** ನಿಗಮದ ವತಿಯಿಂದ ಕೈಗೊಳ್ಳುತ್ತಿರುವ ಕಾಮಗಾರಿಗಳನ್ನು ಮೂರೂ ಹಂತಗಳಲ್ಲಿ ಗುಣಮಟ್ಟದ ತಪಾಸಣೆ ಮಾಡಿ ಉತ್ತಮ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಕುರಿತು.

**ಉಲ್ಲೇಖ:** ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಅರೆ ಸರ್ಕಾರಿ ಪತ್ರ ಸಂ:ಗ್ರಾಅಪ:01:ಸುಗ್ರಾಯೋ:2014 (ಕೆಆರ್‌ಐಡಿಎಲ್) ದಿನಾಂಕ 06-01-2014.

2. ಪ್ರಧಾನ ಕಛೇರಿಯ ಪತ್ರ ಸಂ:ಕೆಎಲ್ಎಸಿ/ವರ್ಕ್ಸ್/ಕ್ಯೂಸಿ/2007-08 ದಿನಾಂಕ 06-02-2008.

# # #

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದ ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಂಸ್ಥೆಯು ರೂ.1.00 ಕೋಟಿ ಮೊತ್ತದವರೆವಿಗೆ ಕಾಮಗಾರಿಗಳ ವಹಿಸುವಿಕೆಗೆ ಕೆ.ಟಿ.ಪಿ.ಪಿ. ಅಧಿನಿಯಮದ ಸೆಕ್ಷನ್ 4ಜಿ ಅಡಿಯಲ್ಲಿ ವಿನಾಯತಿಯನ್ನು ಪಡೆದು ಕಾಮಗಾರಿಗಳನ್ನು ನಿರ್ವಹಿಸುತ್ತಿದ್ದು, ಸಂಸ್ಥೆಯು ನಿರ್ವಹಿಸುವ ಕಾಮಗಾರಿಗಳ ಗುಣಮಟ್ಟದ ಬಗ್ಗೆ ಮೂರೂ ಹಂತಗಳಲ್ಲಿ ಗುಣಮಟ್ಟದ ತಪಾಸಣೆ ವಿಧಾನವನ್ನು ಫೆಬ್ರವರಿ 2014ರಿಂದ ಅನ್ವಯಿಸುವಂತೆ ಅಳವಡಿಸಿಕೊಂಡು, ಉತ್ತಮ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಸೂಚಿಸಿರುತ್ತಾರೆ.

ಮೇಲ್ಕಂಡ ವಿಷಯವು ಅತ್ಯಂತ ಸೂಕ್ಷ್ಮವಾದದ್ದಾಗಿದ್ದು, ಸಂಸ್ಥೆಯು ನಿರ್ವಹಿಸುವ ಕಾಮಗಾರಿಗಳಿಗೆ ಕೆಳಕಂಡಂತೆ ಮೂರು ಹಂತದ ಗುಣನಿಯಂತ್ರಣ ತನಿಖಾ ವ್ಯವಸ್ಥೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅನುಷ್ಠಾನ ಮಾಡಲು ಸೂಚಿಸಲಾಗಿದೆ.

1. ಕಾಮಗಾರಿಯನ್ನು ನಿರ್ವಹಿಸುವ ಸ್ಥಳೀಯ ಅಧಿಕಾರಿಗಳು ಕಾಮಗಾರಿಗೆ ಬಳಸುವ ಕಟ್ಟಡ ಸಾಮಗ್ರಿಗಳ ಹಾಗೂ ಕಾರ್ಯಕೌಶಲ್ಯತೆಯು ನಿರ್ಧಿಷ್ಟಪಡಿಸಿರುವ ವಿಶಿಷ್ಟತೆಯಿಂದ ಕೂಡಿರುವುದನ್ನು ಪರಿಶೀಲಿಸಿ ಖಾತರಿಪಡಿಸಿಕೊಳ್ಳುವುದು.
2. ಜಿಲ್ಲಾಮಟ್ಟದಲ್ಲಿ ಗುಣನಿಯಂತ್ರಣ ವ್ಯವಸ್ಥೆಗೆ ಪರಿವೀಕ್ಷಕರ ತಂಡವನ್ನು ಸಂಸ್ಥೆಯಲ್ಲಿ ರಚಿಸಿಕೊಂಡು, ಅವರುಗಳು ಕಾಮಗಾರಿಗಳ ಪರಿವೀಕ್ಷಣೆಗೆ ಬೇಕಾದ ವರದಿಗಳನ್ನು ಸಲ್ಲಿಸುವುದು ಮತ್ತು ಜಿಲ್ಲಾ ತಂಡದ ಗುಣ ನಿಯಂತ್ರಕರಿಗೆ ಅವಶ್ಯಕ ಮಾಹಿತಿಯನ್ನು ಪೂರೈಸಲು ಸಮನ್ವಯ ರೂಢಿಸಿಕೊಳ್ಳುವಂತೆ ಸೂಚಿಸಲಾಗಿದೆ.
3. ಗುಣನಿಯಂತ್ರಣ ವ್ಯವಸ್ಥೆಗೆ ರಾಜ್ಯ ಮಟ್ಟದ ತಂಡವನ್ನು ಮಾನ್ಯ ಅಪರ ಕಾರ್ಯದರ್ಶಿಗಳು, ಗ್ರಾ.ಪಂ. ಇಲಾಖೆ ಇವರು ನೇಮಿಸಲಿದ್ದು, ಸದರಿ ತಂಡವು ಗ್ರಾ.ಮತ್ತು ಪಂ.ರಾಜ್ ಇಲಾಖೆಯ ಮಾರ್ಗ ಸೂಚಿಯಂತೆ ಕಾಮಗಾರಿಗಳ ಪರಿವೀಕ್ಷಣೆಯನ್ನು ನಡೆಸಲಿದ್ದಾರೆ.

- ಪ್ರಾಜೆಕ್ಟ್ ಅಧಿಕಾರಿಗಳಿಗೆ "Hand feel test" ಮತ್ತು "Laboratory test" ನಡೆಸಲು ಗುಣನಿಯಂತ್ರಣ ವ್ಯವಸ್ಥೆಯ ಕೈಪಿಡಿಯನ್ನು ಮಾಹಿತಿಗಾಗಿ ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸಲಾಗಿದೆ.
- ಪ್ರಾಜೆಕ್ಟ್ ಅಧಿಕಾರಿಗಳು ಕಟ್ಟಡ ಕಾಮಗಾರಿ, ರಸ್ತೆ ಕಾಮಗಾರಿ ಹಾಗೂ ನೀರು ಸರಬರಾಜು ಕಾಮಗಾರಿಗಳಿಗೆ ಉಪಯೋಗಿಸುವ ಕಟ್ಟಡ ಸಾಮಗ್ರಿಗಳಿಗೆ ಸಂಬಂಧಿಸಿಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯು ಅನುಮೋದಿಸಿರುವ ಪ್ರಪತ್ರದಲ್ಲಿ ವಿವರಗಳನ್ನು ತುಂಬಿ ಸಂಭಂಧಿಸಿದ ಕಾಮಗಾರಿಯ ಲೆಕ್ಕಪತ್ರದೊಂದಿಗೆ ಸಲ್ಲಿಸತಕ್ಕದ್ದು. ಸದರಿ ವಿವರಗಳನ್ನು Worksoft ಗೆ ಕೂಡ ಅಪ್ ಲೋಡ್ ಮಾಡಲು ಸೂಚಿಸಲಾಗಿದೆ.
- ಜಿಲ್ಲಾಮಟ್ಟದಲ್ಲಿ ಗುಣನಿಯಂತ್ರಣ ವ್ಯವಸ್ಥೆಗೆ ಪರಿವೀಕ್ಷಕರ ತಂಡವನ್ನು ನೇಮಿಸಿಕೊಳ್ಳುವ ಸಲುವಾಗಿ ಅರ್ಜಿಗಳನ್ನು ಆಹ್ವಾನಿಸಿ, ಸದರಿ ವಿವರಗಳನ್ನು ಸಂಸ್ಥೆಯ ನೋಟೀಸ್ ಬೋರ್ಡ್‌ನಲ್ಲಿಯೂ ಹಾಕಲು ಸೂಚಿಸಲಾಗಿದೆ. ಅರ್ಜಿಗಳನ್ನು ಆಹ್ವಾನಿಸಿರುವ ಪತ್ರವನ್ನು ಸ್ಥಳೀಯ ಇಂಜಿನಿಯರಿಂಗ ಕಾಲೇಜುಗಳಿಗೆ, ಪ್ರೊಫೇಸರ್‌ಗಳಿಗೆ, ನಿವೃತ್ತ ಮುಖ್ಯ ಅಭಿಯಂತರರುಗಳಿಗೆ ಮತ್ತು ಅಧೀಕ್ಷಕ ಅಭಿಯಂತರರುಗಳಿಗೆ ಹಾಗೂ ಸಂಸ್ಥೆಯಲ್ಲಿ ಗುಣನಿಯಂತ್ರಣದ ಪರಿವೀಕ್ಷಣೆಗಾಗಿ ಹೆಸರನ್ನು ನೊಂದಾಯಿಸಿರುವವರಿಗೂ ಕಳುಹಿಸಲು ಸೂಚಿಸಲಾಗಿದೆ.
- ಜಿಲ್ಲಾ ಗುಣನಿಯಂತ್ರಕರು ಸಲ್ಲಿಸಬೇಕಾದ ವಿವರಗಳ ಪ್ರಪತ್ರವನ್ನು ಕೂಡ ಮಾಹಿತಿಗಾಗಿ ಲಗತ್ತಿಸಲಾಗಿದೆ.
- ಗುಣ ನಿಯಂತ್ರಣ ಪರೀಕ್ಷೆಯ ಸಲುವಾಗಿ ವಿಭಾಗ ಮತ್ತು ಉಪ ವಿಭಾಗ ಕಛೇರಿಗಳಲ್ಲಿ ಸಿದ್ದಪಡಿಸಬೇಕಾದ ಸಾಮಗ್ರಿಗಳ ವಿವರಗಳನ್ನು ಗುಣನಿಯಂತ್ರಣ ಮ್ಯಾನುಯಲ್‌ನ ಪುಟ 74 ರಿದ 78ರ ವರೆವಿಗೆ ಗಮನಿಸುವುದು.

ಸಂಸ್ಥೆಯಲ್ಲಿ ಮೂರೂ ಹಂತಗಳ ಗುಣಮಟ್ಟದ ತಪಾಸಣೆ ವಿಧಾನವನ್ನು ಅಳವಡಿಸಿಕೊಳ್ಳುವ ವಿಷಯವನ್ನು ದಿನಾಂಕ 12-02-2014ರಂದು ಜರುಗಿದ ಜಂಟಿ ಮತ್ತು ಉಪ ನಿರ್ದೇಶಕರುಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಈಗಾಗಲೇ ಚರ್ಚಿಸಲಾಗಿರುತ್ತದೆ. ಗುಣನಿಯಂತ್ರಣ ಕೈಪಿಡಿ ಮತ್ತು ನಮೂನೆಗಳು ಕೆಆರ್‌ಐಡಿಎಲ್‌ನ ವೆಬ್ ಸೈಟ್ **www.kridl.gov.in (under download links)** ನಲ್ಲಿ ಲಭ್ಯವಿದ್ದು, ವಿವರಗಳನ್ನು ಪರಿಶೀಲಿಸಿ ನಿಮ್ಮ ಅನಿಸಿಕೆ ಮತ್ತು ಅಭಿಪ್ರಾಯಗಳನ್ನು ದಿನಾಂಕ 28-02-2014ರ ಒಳಗಾಗಿ ತಿಳಿಸಿದಲ್ಲಿ ಕಾಮಗಾರಿಗಳ ನಿರ್ವಹಣೆಯಲ್ಲಿ ಸದರಿ ವಿವರಗಳನ್ನು ಅಳವಡಿಸಲು ಕ್ರಮ ವಹಿಸಲಾಗುವುದು.

ಪ್ರಧಾನ ವ್ಯವಸ್ಥಾಪಕರು (ಉತ್ತರ)

ಕೆಆರ್‌ಐಡಿಎಲ್, ಬೆಂಗಳೂರು.